Chapter 1

# ಅಧ್ಯಾಯ–1

# ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

# ಉತ್ತರ ಕನ್ನಡಜಿಲ್ಲೆಯ ರಂಗಭೂಮಿ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಉತ್ತರ ಕನ್ನಡ ಜಿಲ್ಲೆಯು ಕಾಡು, ಕಡಲುಗಳನ್ನು ಗರ್ಭೀಕರಿಸಿಕೊಂಡಿರುವ, ವೈವಿಧ್ಯಮಯ ಜನಜೀವನವನ್ನೂ, ಹಲವು ಬುಡಕಟ್ಟುಗಳನ್ನೂ ಒಳಗೊಂಡಿರುವ ಜಿಲ್ಲೆ.[1] ಇಲ್ಲಿಯ ಭೌಗೋಳಿಕ – ಸಾಂಸ್ಕೃತಿಕ ವೈವಿಧ್ಯತೆಗೂ, ಇಲ್ಲಿ ಕಂಡುಬರುವ ಕಲಾಪ್ರಕಾರಗಳ ವೈಪುಲ್ಯ ಹಾಗೂ ವೈವಿಧ್ಯಕ್ಕೂ ನೇರ ಸಂಬಂಧ ಇದೆ. ಈ ರಂಗ ವಿಸ್ತಾರದ ಶಕ್ತಿ ಮೂಲಗಳನ್ನು ಹುಡುಕಿಕೊಂಡು ಹೊರಟ ಒಂದು ಪ್ರವಾಸ ಕಥನವಿದು.

ಮೂಲತಃ ಉತ್ತರ ಕನ್ನಡದ ಸಾಂಪ್ರದಾಯಿಕ ಕಲೆಯಾದ ಯಕ್ಷಗಾನದ ಹಿನ್ನೆಲೆಯಿಂದ ಬಂದ ನಾನು, ಈಗಿನ ನನ್ನ ಅಭಿವ್ಯಕ್ತಿಯನ್ನು ಆಧುನಿಕ ರಂಗಭೂಮಿಯ ಮೂಲಕ ಕಂಡುಕೊಳ್ಳುತ್ತಿದ್ದೇನೆ. ಈ ಜಿಲ್ಲೆಯ ಕಲೆಗಳ ಕುರಿತ ನನ್ನ ಆಸಕ್ತಿ ಜನಪದ ಮತ್ತು ಶಿಷ್ಟ ಈ ಎರಡೂ ರಂಗಭೂಮಿಯಲ್ಲಿಯೂ ಸಮಾನವಾಗಿದೆ. ಹೀಗಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರದರ್ಶನಗೊಳ್ಳುತ್ತಿರುವ ಎಲ್ಲಾ ಕಲಾಪ್ರಕಾರಗಳ ಅಧ್ಯಯನ ನನ್ನ ಪ್ರಧಾನ ಆಸಕ್ತಿಯ ನೆಲೆ.

ಉತ್ತರ ಕನ್ನಡದ ಕಲಾ ಪ್ರಕಾರಗಳು ತುಂಬಾ ವಿಶಾಲವಾದ ವ್ಯಾಪ್ತಿಯನ್ನು ಹೊಂದಿವೆ. ಒಂದೆಡೆ ತುಂಬಾ ನಿಗೂಢವೂ , ಸಾಂಕೇತಿಕವೂ ಆದ, 'ತಾಂತ್ರಿಕ' ಎನ್ನಬಹುದಾದ ವಿನ್ಯಾಸಗಳನ್ನು ಹೊಂದಿದ ಸುಗ್ಗಿ ಕುಣಿತದಂತಹ ಕಲಾ ಪ್ರಕಾರಗಳಿದ್ದರೆ, ಇನ್ನೊಂದೆಡೆ ತೀರಾ ಆಧುನಿಕವಾದ ರಂಗಭೂಮಿ ಇದೆ. ಈ ಮಧ್ಯದಲ್ಲಿ ಜಾನಪದವೋ , ಶಾಸ್ತ್ರೀಯವೋ ಎಂಬ ವಿವಾದದಲ್ಲಿರುವ ಯಕ್ಷಗಾನದಂತಹ ರಂಗಪ್ರಕಾರವಿದೆ. ಇವೆಲ್ಲವೂ ಪಾರಸ್ಪರಿಕ ಸಂಬಂಧದ ಸಂಕೀರ್ಣ ಜಾಲವನ್ನು ನಿರ್ಮಿಸಿಕೊಂಡಿದೆ. ಉತ್ತರ ಕನ್ನಡದ ರಂಗಭೂಮಿಯ ಒಟ್ಟೂ ಸ್ವರೂಪವನ್ನು ಅರ್ಥೈಸಿಕೊಳ್ಳಲು ಇವುಗಳಲ್ಲಿಯ ಯಾವುದೋ ಒಂದು ಬಗೆಯ ಕಲಾಪ್ರಕಾರಗಳ ಅಧ್ಯಯನ ನೆರವು ನೀಡಲಾರದು. ಹಾಗಾಗಿ ಆಚರಣೆಗಳಲ್ಲಿ ವ್ಯಕ್ತವಾಗುವ ಕಲಾಪ್ರದರ್ಶನಗಳಿಂದ ಹಿಡಿದು, ಆಧುನಿಕ ರಂಗಭೂಮಿಯವರೆಗಿನ ಬಹುತೇಕ ಎಲ್ಲಾ ಕಲಾಪ್ರಕಾರಗಳನ್ನು ನಾನಿಲ್ಲಿ 'ಉತ್ತರ ಕನ್ನಡ ಜಿಲ್ಲೆಯ ರಂಗಭೂಮಿ' ಎಂಬ ಹೆಸರಿನಡಿ ಅಧ್ಯಯನಕ್ಕೆ ಒಳಪಡಿಸಿದ್ದೇನೆ. ಸಹಜವಾಗಿಯೇ ಈ ಬಗೆಯ ಅಧ್ಯಯನದಲ್ಲಿ ಮೇಲ್ನೋಟಕ್ಕೇ ಗೋಚರವಾಗುವ ಏಕಸೂತ್ರತೆ ದಕ್ಕುವಂತಿಲ್ಲ ಆದರೆ ಪರಿಶೀಲನೆಗೆ ಎತ್ತಿಕೊಂಡ ಎಲ್ಲ ಕಲಾ ಪ್ರಕಾರಗಳಲ್ಲೂ ಮೂಲ ಸ್ರೋತವಾದ ರಂಗಾಂಶವೊಂದರ ಪ್ರವಾಹವನ್ನು ಗುರುತಿಸಬಹುದಾಗಿದೆ. ಈ ಪ್ರವಾಹದಗುಂಟ ಒಂದು ಪಯಣ ಮುಂದಿನ ಪುಟಗಳಲ್ಲಿದೆ.

ಮೂಲತಃ ರಂಗಭೂಮಿ ಎನ್ನುವುದು ಈ ಎಲ್ಲ ಬಗೆಯ ಪ್ರದರ್ಶನ ಕಲೆಗಳನ್ನೂ ಒಳಗೊಳ್ಳುತ್ತದೆ. 'ರಂಗಭೂಮಿ ಎಂದರೇನು?' ಎಂಬ ಪ್ರಶ್ನೆಗೆ ಉತ್ತರ ನೀಡುವಲ್ಲಿ ಕೆ.ವಿ. ಅಕ್ಷರ, ಎರಡು ನಿರ್ವಚನಗಳನ್ನು ಸಂಗ್ರಹಿಸಿ ಕೊಡುತ್ತಾರೆ.[2] ಒಂದನೇ ನಿರ್ವಚನ ಎಂಟನೇ ಶತಮಾನದ ನಂದಿಕೇಶ್ವರನದು. ಆತ ತನ್ನ ಅಭಿನಯ ದರ್ಪಣದಲ್ಲಿ ಬರೆದ ಶಿವ ಸ್ತುತಿ ಹೀಗಿದೆ. "ಇಡೀ ಜಗತ್ತಿನ ಎಲ್ಲ ಚಲನ ವಲನಗಳನ್ನೂ ತನ್ನ ರಂಗಚಲನೆಯಲ್ಲಿ ಕೂಡಿಸಿಕೊಂಡಿರುವ, ಪ್ರಪಂಚದ ಎಲ್ಲ ಭಾಷೆಗಳನ್ನೂ ತನ್ನ ಮಾತುಗಾರಿಕೆಯಲ್ಲಿ ಒಳಪಡಿಸಿಕೊಂಡಿರುವ, ಚಂದ್ರ ತಾರೆಯರನ್ನೇ ತನ್ನ ರಂಗೋಪಕರಣಗಳಾಗಿ ಇಟ್ಟುಕೊಂಡಿರುವ ಮತ್ತು ಆಳದ ಮನುಷ್ಯ ಭಾವನೆಗಳನ್ನು ಅಂತರ್ಗತಗೊಳಿಸಿಕೊಂಡಿರುವ ಶಿವನಿಗೆ ನಮಸ್ಕಾರ." ಅಂದರೆ ಇಲ್ಲಿ ರಂಗಭೂಮಿ, ಲೋಕಸಮಸ್ತವನ್ನೂ ಒಳಗೊಳ್ಳುವ ಒಂದು ಲೋಕಚರಿತ. ಇನ್ನೊಂದು ನಿರ್ವಚನ ಇಪ್ಪತ್ತನೇ ಶತಮಾನದ ಪ್ರಸಿದ್ಧ ನಿರ್ದೇಶಕ ಪೀಟರ್ ಬ್ರೂಕ್‌ನದು. ಅವನ ಪ್ರಕಾರ "ಒಬ್ಬ ಮನುಷ್ಯ ಇತ್ತಲಿಂದ ಅತ್ತ ಹೋಗುತ್ತಿದ್ದಾನೆ. ಇನ್ನೊಬ್ಬ ಮನುಷ್ಯ ಅದನ್ನು ನೋಡುತ್ತಿದ್ದಾನೆ ಅನ್ನಿ. ರಂಗಭೂಮಿ ಎಂಬ ಕ್ರಿಯೆ ಹುಟ್ಟಲಿಕ್ಕೆ ಇಷ್ಟೇ ಸಾಕು." ರಂಗ ಭೂಮಿಯ ವ್ಯಾಪ್ತಿಯನ್ನು ಅರಿಯಲು ಈ ನಿರ್ವಚನಗಳು ನೆರವು ನೀಡುತ್ತವೆ. ಈ ನಿಟ್ಟಿನಲ್ಲಿ ಪ್ರಸ್ತುತ ಪ್ರಬಂಧವು ಹೂವಿನ ಮಕ್ಕಳ ಕುಣಿತದಂತಹ ತೀರ ಸರಳ ಕುಣಿತದಿಂದ ಹಿಡಿದು ಯಕ್ಷಗಾನ, ಆಧುನಿಕ ರಂಗ ಭೂಮಿಯಂತಹ ತೀರ ಸಂಕೀರ್ಣ ಪ್ರದರ್ಶನಗಳವರೆಗಿನ ಎಲ್ಲವನ್ನೂ 'ರಂಗಭೂಮಿ' ಎಂದೇ ಪರಿಗಣಿಸಿ ಚರ್ಚಿಸಿದೆ.

ಉತ್ತರಕನ್ನಡದ ರಂಗಭೂಮಿಯನ್ನು ಅಭ್ಯಾಸದ ಅನುಕೂಲಕ್ಕಾಗಿ ಮೂರು ಸ್ಥೂಲ ವಿಭಾಗಗಳಲ್ಲಿ ಅಳವಡಿಸಿಕೊಳ್ಳಲಾಗಿದೆ.

1. ಮೂಲತಃ ಆಚರಣೆಯ ಭಾಗವಾಗಿರುವ ಹಾಗೂ ಪ್ರದರ್ಶನೋದ್ದೇಶ ಪ್ರಧಾನವಾಗಿರದ ಹಲವು ಜನಪದ ಕಲಾಪ್ರಕಾರಗಳಿಗೆ ರಂಗಕಲೆಯಾಗಿ ಅರಳಿಕೊಳ್ಳಬಲ್ಲ ಸಾಧ್ಯತೆ ಇರುವುದನ್ನು ಗುರುತಿಸಿ ಅವುಗಳನ್ನು 'ಅರೆ ರಂಗಕಲೆ ' ಎಂದು ಇಲ್ಲಿ ಗ್ರಹಿಸಲಾಗಿದೆ . ಈ ಅರೆರಂಗ ಕಲೆಗಳನ್ನು 'ನೃತ್ಯ ಪ್ರಧಾನ' , 'ವೇಷ ಪ್ರಧಾನ', 'ವಾದ್ಯ ಪ್ರಧಾನ' ಎಂಬ ಶೀರ್ಷಿಕೆಯಡಿ ಅಭ್ಯಾಸ ಮಾಡಲಾಗಿದೆ.
2. ಯಕ್ಷಗಾನರಂಗಭೂಮಿಯನ್ನು ಅದರಲ್ಲಿಯೂ ಉತ್ತರ ಕನ್ನಡದಲ್ಲಿ ಅದು ಪಡೆದುಕೊಂಡಿರುವ ವಿಶಿಷ್ಟ ಸ್ವರೂಪವನ್ನು 'ಉತ್ತರ ಕನ್ನಡದ ತಿಟ್ಟು' ಎಂಬ ಶೀರ್ಷಿಕೆಯಡಿ ಚರ್ಚಿಸಲಾಗಿದೆ.
3. ಶಿಷ್ಟ ರಂಗಭೂಮಿಯ ಮತ್ತು ಮೇಲೆಹೇಳಿದ ಎಲ್ಲ ಬಗೆಯ ಸಾಂಪ್ರದಾಯಿಕ ರಂಗ ಕಲೆಗಳ ಅನ್ವಯಿಕ ಬಗೆಯನ್ನು ಕುರಿತು 'ಆಧುನಿಕ ರಂಗಭೂಮಿ ಮತ್ತು ಅನ್ವಯಿಕ ಮೀಮಾಂಸೆ' ಎಂಬ ಶೀರ್ಷಿಕೆಯಡಿ ಇಲ್ಲಿ ಅಭ್ಯಾಸ ನಡೆದಿದೆ.

ಉತ್ತರ ಕನ್ನಡದಲ್ಲಿ ಇಂದಿಗೂ ಪ್ರದರ್ಶನಗೊಳ್ಳುತ್ತಿರುವ, ಪ್ರಭಾವಶಾಲಿ ರಂಗಾಂಶವನ್ನು ಹೊಂದಿರುವ ಹಾಗೂ ಈ ಜಿಲ್ಲೆಗೇ ವಿಶಿಷ್ಟವೆನಿಸಿರುವ ಪ್ರಕಾರಗಳನ್ನು ಮಾತ್ರ ಇಲ್ಲಿ ಗಮನಿಸಲಾಗಿದೆ. ಅಂದರೆ, ಇಲ್ಲಿ ಕ್ವಚಿತ್ತಾಗಿ ಮಾತ್ರವೇ ಪ್ರದರ್ಶನಗೊಳ್ಳುತ್ತಿದ್ದು ಈ ಜಿಲ್ಲೆಯದೇ ಎನ್ನಬಹುದಾದ ಯಾವ ವೈಶಿಷ್ಟ್ಯವನ್ನೂ ಹೊಂದಿರದ ಕಲೆಗಳನ್ನು ಅಧ್ಯಯನಕ್ಕೆ ಒಳಪಡಿಸಿಲ್ಲ. ಉದಾಹರಣೆಗೆ ಡೊಳ್ಳು ಕುಣಿತ, ಜೋಗೇರ ಪದ , ಸಣ್ಣಾಟ–ಇವೆಲ್ಲ ಇಲ್ಲಿ ಆಗೀಗ ಪ್ರದರ್ಶನ ಕಂಡರೂ ಅವು ಉತ್ತರಕನ್ನಡದ್ದೇ ವಿಶಿಷ್ಟವಾದ ಕಲಾಪ್ರಕಾರಗಳಲ್ಲ. ಅಲ್ಲದೇ ಉತ್ತರ ಕನ್ನಡದ ರಂಗವೈಶಿಷ್ಟ್ಯಗಳು ಇವುಗಳ ಮೇಲಾಗಲಿ ಅಥವಾ ಈ ಕಲೆಗಳು ಉತ್ತರ ಕನ್ನಡದ ಇತರ ರಂಗಕಲೆಗಳ ಮೇಲಾಗಲಿ ಪರಸ್ಪರ ಯಾವುದೇ ಸಂಬಂಧ/ಪ್ರಭಾವ ಹೊಂದಿರುವುದು ಕಂಡುಬಂದಿಲ್ಲ . ಇದೇ ರೀತಿ ಉತ್ತರ ಕನ್ನಡಜಿಲ್ಲೆಯ ಆಡಳಿತ ವ್ಯಾಪ್ತಿಯಲ್ಲೇ ಬರುವ ಮುಂಡಗೋಡಿನ ಟಿಬೆಟಿಯನ್ನರ ಕಲೆಗಳನ್ನಾಗಲೀ , ಹಳಿಯಾಳ, ಯಲ್ಲಾಪುರ ಗಡಿ ಭಾಗದಲ್ಲಿರುವ ಗೌಳಿಗರ ಕಲೆಗಳನ್ನಾಗಲೀ ಅಭ್ಯಾಸದ ವ್ಯಾಪ್ತಿಯಲ್ಲಿ ಒಳಗೊಂಡಿಲ್ಲ.

ಈ ಅಧ್ಯಯನದ ಹಿಂದಿನ ತಾತ್ವಿಕತೆಯು ಮೂಲತಃ ಆಧುನಿಕ ರಂಗ ಮೀಮಾಂಸೆಯ ಮೂಸೆಯಲ್ಲಿ ರೂಪುಗೊಂಡಿದ್ದಾಗಿದೆ . ಇಲ್ಲಿ ಚರ್ಚಿಸಿರುವ ಕಲಾ ಪ್ರಕಾರಗಳನ್ನೆಲ್ಲ, ಒಂದು ಸಮಾನ ದೂರದಲ್ಲಿ ನಿಂತು ರಂಗಭೂಮಿಯ ದೃಷ್ಟಿಯಿಂದ ನೋಡಿ ದಾಖಲಿಸುವ ಪ್ರಯತ್ನವಿದು. ಪ್ರದರ್ಶನ ಮತ್ತು ಪ್ರೇಕ್ಷಕರ ನಡುವಿನ ಸಂವಹನದ ಮಾದರಿಗಳನ್ನು ಹುಡುಕುವ , ಸಾಂಪ್ರದಾಯಿಕ ರಂಗಭೂಮಿಯ ಶಕ್ತಿ ಮೂಲಗಳನ್ನು ಅರಸುವ ಕುತೂಹಲವನ್ನೂ, ಇವೆಲ್ಲವುಗಳಿಂದ ಆಧುನಿಕ ರಂಗಭೂಮಿ ಕಲಿಯಬಹುದಾದದ್ದನ್ನೂ, ಆ ಮೂಲಕ ಆಧುನಿಕ ರಂಗಭೂಮಿ ತನ್ನ ಮಿತಿಗಳನ್ನು ದಾಟಬಹುದಾದ ಸಾಧ್ಯತೆಗಳನ್ನೂ ಸಂಶೋಧಿಸುವ ಆಶಯ ಈ ಅಧ್ಯಯನದ ಹಿಂದಿದೆ.

ಇಲ್ಲಿ ಜನಪದ ಕಲಾಪ್ರಕಾರಗಳನ್ನು ನೃತ್ಯ, ವೇಷ, ಹಾಗೂ ವಾದ್ಯಪ್ರಧಾನ ಕಲೆಗಳೆಂದು ವಿಭಾಗಿಸಿಕೊಳ್ಳಲಾಗಿದೆಯಷ್ಟೇ. ಹಾಗೆ ನೋಡಿದರೆ ಯಾವುದೇ ಕಲಾಪ್ರಕಾರದಲ್ಲೂ ಸಹಿತ ಅದರ ರಂಗಾಂಶಗಳನ್ನು ಬಿಡಿ ಬಿಡಿಯಾಗಿ ಅರ್ಥೈಸಲು ಸಾಧ್ಯವಿಲ್ಲ. ಪ್ರತಿಯೊಂದು ಕಲಾ ಪ್ರಕಾರವೂ ಹಲವು ರಂಗಾಂಶಗಳನ್ನು ಒಳಗೊಂಡು 'ಇಡಿ'ಯಾಗಿಯೇ ಪ್ರದರ್ಶನಗೊಳ್ಳುತ್ತದೆ. ಉದಾಹರಣೆಗೆ: ವೇಷ ಪ್ರಧಾನ ಕಲೆಯಲ್ಲಿ ಚರ್ಚಿತವಾಗಿರುವ ಸಿಂಹ ನೃತ್ಯ , ಪ್ರೇತ ನೃತ್ಯ , ಬೇಡರ ವೇಷಗಳು, 'ವೇಷ'ವೈಶಿಷ್ಟ್ಯಗಳೊಂದಿಗೆ ನೃತ್ಯವನ್ನೂ ಸಹ ಸಂವಹನ ಮಾಧ್ಯಮವನ್ನಾಗಿ ಬಳಸುವ ಕಲಾಪ್ರಕಾರಗಳಾಗಿವೆ. ನೃತ್ಯ ಪ್ರಧಾನ ಕಲೆಯಲ್ಲಿ ಚರ್ಚೆ ಮಾಡಿರುವ ಗೊಂಡರಕುಣಿತದಲ್ಲಿ 'ಢಕ್ಕೆ' ಎಂಬ ವಾದ್ಯವೂ ಪ್ರಮುಖ ಪಾತ್ರವಹಿಸುತ್ತದೆ. ವಾದ್ಯ ಪ್ರಧಾನ ಕಲೆಯಲ್ಲಿ ಚರ್ಚಿತವಾದ ಡಮಾಮಿ ಕುಣಿತದಲ್ಲಿ, ಡಮಾಮಿ ವಾದ್ಯದಷ್ಟೇ ಅದರ ಜತೆಗಿನ ಕುಣಿತವೂ ಮಹತ್ವ ಹೊಂದಿದೆ. ಹಗಣವೆಂಬ ಕಲಾಪ್ರಕಾರವಂತೂ, ಭಿನ್ನ ಭಿನ್ನ ಬಗೆಯಲ್ಲಿ ಪ್ರದರ್ಶನಗೊಳ್ಳುತ್ತಿದ್ದು ಈ ಬಗೆಯ ವಿಂಗಡನೆಯನ್ನೇ ನಿರಾಕರಿಸುವಂತಿದೆ.

ಹಾಗಾದರೆ ಈ ಕಲೆಗಳನ್ನು ಇಲ್ಲಿ ಪ್ರತ್ಯೇಕ ಪ್ರತ್ಯೇಕವಾದ ಶೀರ್ಷಿಕೆಯಡಿ ಅಧ್ಯಯನ ನಡೆಸಿರುವುದರ ತಾತ್ವಿಕ ಜರೂರು ಏನೆಂದು ವಿವರಿಸಬೇಕು. ಇದುವರೆಗಿನ ಬಹುತೇಕ ಜನಪದ ಅಧ್ಯಯನಗಳು (ಉದಾ: ಹಂಪಿ ವಿಶ್ವವಿದ್ಯಾನಿಲಯವು ಪ್ರಕಟಿಸಿರುವ 'ಕರ್ನಾಟಕ ಜನಪದ ಕಲೆಗಳ ಕೋಶ', ಆರ್.ಆರ್.ಸಿ.ಉಡುಪಿ ಪ್ರಕಟಿಸಿರುವ 'ಉತ್ತರ ಕನ್ನಡದ ಸುಗ್ಗಿ ಹಬ್ಬ' ಇತ್ಯಾದಿ ಗ್ರಂಥಗಳು) ಈ ಜನಪದ ಕಲಾಪ್ರಕಾರಗಳನ್ನು ಆಚರಣೆಯ ಹಿನ್ನೆಲೆಯಿಂದ ಮಾತ್ರ ಗಮನಿಸಿವೆ. ರಂಗಭೂಮಿಯ ದೃಷ್ಟಿಯಿಂದ ಇವು ಇನ್ನೂ ಚರ್ಚಿಸಲ್ಪಟ್ಟಿಲ್ಲ. ಆಧುನಿಕ ರಂಗಭೂಮಿಯೂ ಸಹ ಈಗಾಗಲೇ ಪೂರ್ಣಪ್ರಮಾಣದಲ್ಲಿ ಬೆಳೆದು ನಿಂತಿರುವ, ಅಂದರೆ, ಪ್ರದರ್ಶನವನ್ನೇ ಪ್ರಧಾನ ಉದ್ದೇಶವಾಗಿಸಿಕೊಂಡು ಅಂಗಿಕ , ವಾಚಿಕ, ಅಹಾರ್ಯಗಳಲ್ಲೆಲ್ಲ ಸಾಕಷ್ಟು ಬೆಳೆದುನಿಂತ ಜನಪದ ರಂಗಭೂಮಿಯನ್ನು ಮಾತ್ರ ಹೆಚ್ಚಿನ ಆಸಕ್ತಿಯಿಂದ ಗಮನಿಸಿದೆ: ತನಗೆ ಅಗತ್ಯವೆನಿಸಿದ ಅಂಶಗಳನ್ನು ಇವುಗಳಿಂದ ಸ್ವೀಕರಿಸಲೂ ಪ್ರಯತ್ನಿಸಿದೆ. ಆದರೆ ಅರೆರಂಗ ಪ್ರಕಾರಗಳನ್ನು ಈ ದೃಷ್ಟಿಯಿಂದ ಗಮನಿಸಿಲ್ಲ. ಹೀಗೇ ಆಚರಣೆ ಎಂಬ ದೃಷ್ಟಿಯಿಂದ ಚರ್ಚಿಸಿದಾಗ ಈ ಪ್ರಕಾರಗಳ ಕಲಾತ್ಮಕತೆಯೂ, ರಂಗಸಾಧ್ಯತೆಗಳೂ ಮರೆಯಾಗಿಹೋದರೆ, ಜನಪದರಂಗಭೂಮಿಯ ಅಧ್ಯಯನಗಳಲ್ಲಿ ಇವು ಪೂರ್ಣಪ್ರಮಾಣದ ರಂಗಕಲೆಗಳು ಅಲ್ಲ ಎಂಬ ಕಾರಣದಿಂದ ಉಪೇಕ್ಷಿಸಲ್ಪಟ್ಟಿವೆ. ಆದ್ದರಿಂದ ಈ ಕಲಾಪ್ರಕಾರಗಳ ಅಧ್ಯಯನವನ್ನು ನಾವು ಉಪೇಕ್ಷಿತ ಕಲಾಪ್ರಕಾರಗಳ ಅಧ್ಯಯನ ಎಂದು ಸಹ ಹೇಳಬಹುದು.

ಜನಪದ ಕಲಾಪ್ರಕಾರಗಳ ಅಧ್ಯಯನ/ಜನಪದರಂಗಭೂಮಿಯ ಅಧ್ಯಯನದಂತಹ ವಿಸ್ತಾರವಾದ ಭಿತ್ತಿಯ ಒಳಗೆ ಕಾಣಿಸದೇ ಹೋಗಬಹುದಾದ ರಂಗಸಾಧ್ಯತೆ ಇರುವ ಕಲಾಪ್ರಕಾರಗಳನ್ನು ಚರ್ಚೆಯ ಕೇಂದ್ರಕ್ಕೆ ತರುವುದಕ್ಕಾಗಿ ಅವುಗಳ ಪ್ರಧಾನ ಸಂವಹನಸಾಧ್ಯತೆಗಳನ್ನೂ ರಂಗಾಂಶದ ಬಳಕೆಯನ್ನೂ ಅನುಲಕ್ಷಿಸಿ 'ನೃತ್ಯಪ್ರಧಾನ', 'ವೇಷಪ್ರಧಾನ', 'ವಾದ್ಯಪ್ರಧಾನ' ಎಂದು ವಿಂಗಡಿಸಲಾಗಿದೆ. ಹಾಗೂ ಪ್ರತಿ ವಿಭಾಗವೂ ಒಳಗೊಂಡಿರುವ ಕಲಾ ಪ್ರಕಾರಗಳನ್ನೂ ಸ್ವತಂತ್ರ ಘಟಕ/ಪ್ರಕಾರವೆಂಬಂತೆ ಸ್ವೀಕರಿಸಿ ಚರ್ಚಿಸಲಾಗಿದೆ. ಇದರಿಂದ ಪ್ರಸ್ತುತ ಕಲಾಪ್ರಕಾರಗಳ ರಂಗಾಂಶಗಳನ್ನು ಮುನ್ನೆಲೆಗೆ ತಂದು ಚರ್ಚಿಸಲು ಅವಕಾಶವಾಗುತ್ತದೆ.

ಪ್ರತಿಯೊಂದು ಅಧ್ಯಾಯವನ್ನೂ ವಿಷಯ ಮಂಡನೆಗಾಗಿ ಈ ಕೆಳಗಿನ ಕ್ರಮದಲ್ಲಿ ವಿಭಾಗಿಸಿಕೊಳ್ಳಲಾಗಿದೆ.

- **ಪ್ರವೇಶ** : ಚರ್ಚೆಗಾಗಿ ಎತ್ತಿಕೊಂಡ ಕಲಾಪ್ರಕಾರದ ಸಾಮಾಜಿಕ, ಸಾಂಸ್ಕೃತಿಕ ಹಿನ್ನೆಲೆಯನ್ನು ಒಳಗೊಂಡ ಭಾಗವಿದು. ಪ್ರದರ್ಶನ ವಿಶ್ಲೇಷಣೆಗೆ ಬೇಕಾದ ಪೂರಕ ಮಾಹಿತಿಯನ್ನೂ ಈ ಭಾಗದಲ್ಲಿ ಅಳವಡಿಸಲಾಗಿದೆ.
- **ಪ್ರದರ್ಶನ** : ದಾಖಲಿಸಿಕೊಂಡ ಆಯ್ದ ಪ್ರಾತಿನಿಧಿಕ ಪ್ರದರ್ಶನಪಠ್ಯದ ಸಮಗ್ರ ವಿವರಣೆ ಈಭಾಗದಲ್ಲಿದೆ.
- **ವಿಶ್ಲೇಷಣೆ** : ಆಯಾ ಕಲಾಪ್ರಕಾರವನ್ನು ಆಧುನಿಕ ರಂಗಭೂಮಿಯ ದೃಷ್ಟಿಯಿಂದ ವಿವೇಚಿಸಿದ ಭಾಗವಿದು.

ಉತ್ತರ ಕನ್ನಡದ ರಂಗಭೂಮಿಯನ್ನು ಸಮಗ್ರವಾಗಿ ಒಳಗೊಳ್ಳುವಂತೆ ಈ ಕೆಳಗಿನ ಅಧ್ಯಾಯಗಳನ್ನು ವಿಭಾಗಿಸಿಕೊಳ್ಳಲಾಗಿದೆ.

## ಜನಪದ ಅರೆರಂಗ ಕಲೆಗಳು (ನೃತ್ಯ ಪ್ರಧಾನ)

1. **ಹೂವಿನ ಮಕ್ಕಳ ಕುಣಿತ**

ಪ್ರದರ್ಶನ ಸಿದ್ಧಾಂತದ ತಾತ್ವಿಕ ತಿಳುವಳಿಕೆ ಹಾಗೂ ಅಧ್ಯಯನ ವಿಧಾನವನ್ನೂ ಬಳಸಿ ಈ ವಿಶಿಷ್ಟ ನೃತ್ಯ ಪ್ರಧಾನ ಕಲೆಯನ್ನು ಅಧ್ಯಯನ ಮಾಡಲಾಗಿದೆ. ಕುಣಿತಗಳ ಹಿಂದಿನ ಉದ್ದೇಶವನ್ನು, ಹೂವಿನ ಮಕ್ಕಳ ಕುಣಿತದ ಸಾಂದರ್ಭಿಕ ವಿವರಗಳನ್ನು , ಹೂವಿನ ಮಕ್ಕಳ ಉಡಿಗೆ–ತೊಡಿಗೆ, ಪರಿಕರ , ನಟರು, ರಂಗಸ್ಥಳ, ಕುಣಿತದ ಅರ್ಥ ಅಭಿನಯ, ಪ್ರದರ್ಶನ ವಿನ್ಯಾಸ , ಪ್ರೇಕ್ಷಕರು ಮತ್ತು ಪ್ರದರ್ಶನ ಈ ಎಲ್ಲ ಅಂಶಗಳನ್ನೂ ಇಲ್ಲಿ ಚರ್ಚಿಸಲಾಗಿದೆ. ಈ ಕುಣಿತ ನಿರ್ಮಿತಿಗೊಂಡ ಕಾಲ, ಇಂತಹ ಕುಣಿತಗಳ ಹಿಂದಿನ ತರ್ಕವನ್ನೂ , ಕೃಷಿಯ ಬದುಕು ಕುಣಿತವಾಗಿರುವದರ ಹಿಂದಿನ, 'ಮಾಂತ್ರಿಕ' ಎನ್ನಬಹುದಾದ ಉದ್ದೇಶಗಳನ್ನೂ, ಕೃಷಿ ಮತ್ತು ಮಹಿಳೆಯ ಹಾಗೂ ಮಹಿಳೆ ಮತ್ತು ಕುಣಿತಗಳ ಸಂಬಂಧವನ್ನೂ, ವಿವರವಾಗಿ ಚರ್ಚಿಸಲಾಗಿದೆ. ಈ ನೃತ್ಯ ಮತ್ತು ಮಾಂತ್ರಿಕ ಆಚರಣೆಗಳಿಗೆ ಇರುವ ಸಂಬಂಧಗಳಿಗೆ ಜಗತ್ತಿನಾದ್ಯಂತ ಸಾಕಷ್ಟು ಉದಾಹರಣೆಗಳು ಲಭ್ಯವಿದ್ದು ಅವುಗಳಲ್ಲಿ ಕೆಲವನ್ನು ಸಂಗ್ರಹಿಸಿ ಟಿಪ್ಪಣಿಯಲ್ಲಿ ನೀಡಲಾಗಿದೆ. ಸುಗ್ಗಿ ಕುಣಿತ, ಗೊಂಡರ ಕುಣಿತ, ಕುಣಬಿಗಳ ಕುಣಿತ – ಇಲ್ಲೆಲ್ಲ ಕುಣಿತಗಾರರ ವೇಷ ಭೂಷಣಗಳಲ್ಲಿ ಕಂಡುಬರುವ ಹೆಣ್ಣಿನ ಪ್ರಸಾದನ ಮಾದರಿಗಳಿಗೆ ಸಂಬಂಧಿಸಿದಂತೆ, ಮಾಂತ್ರಿಕ ಎನ್ನಬಹುದಾದ ಉದ್ದೇಶಗಳಿಗೆ ಸಂಬಂಧಿಸಿದಂತೆ ಕೊಡಬಹುದಾದ ವಿವರಣೆಗಳು ಹೂವಿನ ಮಕ್ಕಳ ಅಧ್ಯಯನದಲ್ಲಿ ನೀಡಲಾದ ವಿವರಗಳನ್ನೇ ಹೋಲುವದರಿಂದ ಪುನರಾವರ್ತನೆ ಆಗದಿರಲೆಂದು ಇಲ್ಲಿಯೇ ಅವುಗಳನ್ನೂ ಚರ್ಚಿಸಲಾಗಿದೆ.

2. **ಹಾಲಕ್ಕಿ ಸುಗ್ಗಿ ಕುಣಿತ**

ಹಾಲಕ್ಕಿ ಜನಾಂಗದ ಸುಗ್ಗಿ ಕುಣಿತದಲ್ಲಿ ಬಳಕೆಯಲ್ಲಿರುವ ಹಿರಿಸುಗ್ಗಿ ಎಂಬ ಪ್ರದರ್ಶನವನ್ನು ಮುಖ್ಯವಾಗಿಟ್ಟು ಕೊಂಡು ಈ ಅಧ್ಯಯನ ನಡೆದಿದೆ.. 'ಹಿರಿಸುಗ್ಗಿ' ಎಂದು ಹೆಸರಾದ ಸುಗ್ಗಿ ಕುಣಿತವನ್ನು ನಟ, ರಂಗಸ್ಥಳ, ಉಡಿಗೆ–ತೊಡಿಗೆ, ಹಿಮ್ಮೇಳ , ಕುಣಿತದ ಗಣಿತ, ಲಯವಿನ್ಯಾಸಗಳ ವಿವರಗಳಡಿ ಅಧ್ಯಯನ ಮಾಡಲಾಗಿದೆ. ಮುಖ್ಯವಾಗಿ, ಈ ಕುಣಿತದ ವಿನ್ಯಾಸವನ್ನು ಚಿತ್ರ ಮತ್ತು ಬರೆಹ – ಈ ಎರಡೂ ಮಾಧ್ಯಮಗಳಲ್ಲಿ ದಾಖಲಿಸಲಾಗಿದೆ.

### 3. ಗೊಂಡರ ಕುಣಿತ

ಗೊಂಡರ ಸುಗ್ಗಿ ಕುಣಿತ, ಮಂಡಳ ಕುಣಿತ ಮತ್ತು ಹರಿದಿನ ಕುಣಿತಗಳನ್ನು ಈ ವಿಭಾಗದಲ್ಲಿ ಅಧ್ಯಯನ ಮಾಡಲಾಗಿದೆ. ರಂಗಸ್ಥಳ, ವೇಷಭೂಷಣ, ಬಳಸುವ ವಾದ್ಯ , ಕಾಮನಂಗಿ ವೇಷಗಳು – ಈ ಎಲ್ಲ ವಿವರಗಳ ಜತೆ ಕುಣಿತದ ವಿನ್ಯಾಸ ಮತ್ತು ಲಯವನ್ನು ಚಿತ್ರ ಸಹಿತ ವಿವರಿಸಲಾಗಿದೆ.

### 4. ಮರಾಠಿಗರ ಕೋಲು ಕುಣಿತ

ಉತ್ತರಕನ್ನಡ ಜಿಲ್ಲೆಯಲ್ಲಿರುವ ಮರಾಠಿಗರು ಎಂಬ ಜನಾಂಗ ಆಡುವ ಕೋಲಾಟ, ಉಳಿದೆಡೆ ನಾವು ಕಾಣುವ ತಾಂತ್ರಿಕವಾದ ವಿನ್ಯಾಸದ ಕೋಲಾಟವಲ್ಲ . ಬಹಳಷ್ಟು ಕಡೆ ಈಗ ತಪ್ಪಿಹೋಗಿರುವ ಸಾಹಿತ್ಯ ಮತ್ತು ಕುಣಿತದ ಸಂಬಂಧವನ್ನು ಈ ಜನಾಂಗ ಇನ್ನೂ ಉಳಿಸಿಕೊಂಡಿದೆ. ಕುಣಿತದಲ್ಲಿ ಬಳಕೆಯಾಗುವ ಸಾಹಿತ್ಯ ಅವರ ಬದುಕಿನೊಂದಿಗೆ ನೇರ ಸಂಬಂಧವುಳ್ಳದ್ದು. ಈ ಕೋಲು ಕುಣಿತದ ಸಾಹಿತ್ಯವನ್ನೂ ಅವರ ಕುಣಿತದ ಬಗೆಯನ್ನೂ ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

### 5. ಪುಗಡಿ ಕುಣಿತ

ಈ ಅಧ್ಯಾಯದಲ್ಲಿ 'ಪುಗಡಿ' ಶಬ್ದದ ನಿಷ್ಪತ್ತಿ, ಕೊಂಕಣ ಖಾರ್ವಿ ಜನಾಂಗದವರು ಈ ಕುಣಿತಗಳನ್ನು ಕುಣಿಯುವ ವಿಧಾನ, ಸಿದ್ದಿ ಜನಾಂಗದವರು ಕುಣಿಯುವ ಪುಗಡಿಯ ವೈಶಿಷ್ಟ್ಯ (ಮುಖ್ಯವಾಗಿ ಅವರ ಹಿಮ್ಮೇಳ, ಲಯ, ಕುಣಿತದ ರೂಪ – ರೇಖೆ, ಹಾಡುಗಳು) – ಇವುಗಳನ್ನು ಚರ್ಚಿಸಲಾಗಿದೆ.

## ಜನಪದ ಅರೆರಂಗ ಕಲೆಗಳು (ವೇಷ ಪ್ರಧಾನ)

### 1. ಹಗ(ರ)ಣ

ಹಗಣಗಳ ಕುರಿತು ಇದುವರೆಗೆ ನಡೆದ ಚರ್ಚೆಗಳನ್ನೂ, ಈ ಕುರಿತು ಇರುವ ಸಾಂಪ್ರದಾಯಿಕ ವ್ಯಾಖ್ಯೆಗಳನ್ನೂ ಪುನಃ ಚರ್ಚಿಸದೇ ಹಗಣದ ವಿವಿಧ ಕಾರ್ಯಗಳನ್ನು ಇಲ್ಲಿ ಚರ್ಚಿಸಲಾಗಿದೆ. ಸುಗ್ಗಿ ಮುಂತಾದ ಉತ್ಸವಗಳ ಸಂದರ್ಭಗಳಲ್ಲಿ ಪ್ರದರ್ಶನಗೊಳ್ಳುವ ಹಗಣ ಹಾಗೂ ಹಾಲಕ್ಕಿ ಜನಾಂಗದವರು ಆಚರಿಸುವ 'ಪಾನಕ ಪೂಜೆ ' ಎಂಬ ಆಚರಣೆಯಲ್ಲಿ ಪ್ರಯೋಗವಾಗುವ ಹಗಣ, ಬಂಡಿ ಹಬ್ಬ ಹಾಗೂ ಜಾತ್ರೆಗಳಲ್ಲಿ ಪ್ರದರ್ಶನವಾಗುವ ಹಗಣಗಳನ್ನು ಇಲ್ಲಿ ಅಭ್ಯಸಿಸಲಾಗಿದೆ. ಹಗಣದ ರಂಜನೆಯ ಹಿಂದಿರುವ ಪ್ರತಿಭಟನೆಯ ರೂಪಗಳನ್ನು ಗುರುತಿಸಲಾಗಿದೆ. ಬಹುತೇಕ ಎಲ್ಲ ಜನಪದ ಕಲೆಗಳೂ ಸಮಾವೇಶವಾಗಿ ಬಿಡಬಹುದಾದ ಹಗಣದ ಅಪಾರ ವ್ಯಾಪ್ತಿಯನ್ನೂ , ರಂಗಭೂಮಿಯ ಮಹಾ ಸಂಕಥನವನ್ನು ಒಡೆಯುವ ಅದರ ಜಂಗಮ

ಸ್ವರೂಪವನ್ನೂ ಈ ವಿಭಾಗದಲ್ಲಿ ಚರ್ಚಿಸಲಾಗಿದೆ. ಸರಳ ರಂಗ ಪರಿಕರಗಳ ಮೂಲಕ ಅದು ಸಾಧಿಸುವ ಪರಿಣಾಮಗಳನ್ನೂ ರಂಗತಂತ್ರದ ಹಿನ್ನೆಲೆಯಲ್ಲಿ ನೋಡಲಾಗಿದೆ.

2. **ಬೇಡರ ವೇಷ.**

ಶಿರಸಿಯಲ್ಲಿ ಮಾತ್ರವೇ ಕಾಣಸಿಗುವ ಈ ಕುಣಿತವನ್ನು ಅದರ ಐತಿಹ್ಯಗಳ ವಿಶ್ಲೇಷಣೆ, ವೇಷ ಮತ್ತು ವಿನ್ಯಾಸದ ರಾಚನಿಕ ಅಧ್ಯಯನ, ಮುಖವರ್ಣಿಕೆ ಮತ್ತು ಕುಣಿತದ ವೈಶಿಷ್ಟ್ಯಗಳ ಚರ್ಚೆ – ಇವುಗಳ ಮೂಲಕ ಹೊಸದಾಗಿ ವ್ಯಾಖ್ಯಾನಿಸಲಾಗಿದೆ. ಈ ಅಧ್ಯಯನವು ತಲುಪಿರುವ ತೀರ್ಮಾನಗಳು ಪ್ರಸ್ತುತ ಕುಣಿತದ ಕುರಿತು ಪ್ರಚಲಿತವಿರುವ ಅನೇಕ ಅಭಿಪ್ರಾಯ/ನಿಲುವುಗಳನ್ನು ಪರಿಷ್ಕರಿಸುತ್ತವೆ.

3. **ಸಿಂಹ ನೃತ್ಯ ಮತ್ತು ಪ್ರೇತ ನೃತ್ಯ**

ಯಕ್ಷಗಾನದ ಆವರಣದಲ್ಲಿ ಸೃಷ್ಟಿಗೊಂಡು ಸ್ವತಂತ್ರ ಪ್ರದರ್ಶನ ಕಲೆಯಾಗಿ ಬೆಳೆದು ನಿಂತ ಸಿಂಹನೃತ್ಯವನ್ನೂ, ಹೊರ ಆವರಣದಲ್ಲಿ ಸೃಷ್ಟಿಗೊಂಡು ಯಕ್ಷಗಾನದಲ್ಲಿ ಬಳಕೆಗೊಳ್ಳುತ್ತಿರುವ ಪ್ರೇತನೃತ್ಯವನ್ನೂ ಇಲ್ಲಿ ವಿವರವಾಗಿ ಅಧ್ಯಯನ ಮಾಡಲಾಗಿದೆ. ಸಿಂಹನೃತ್ಯದ ಹುಟ್ಟಿಗೆ ಕಾರಣರಾದ ಸುಬ್ಬು ಹಾಸ್ಯಗಾರರ ಮಗನ ಸಂದರ್ಶನವನ್ನೂ, ಪ್ರೇತನೃತ್ಯದ ಹುಟ್ಟಿಗೆ ಕಾರಣರಾದ ಕೆ.ಪಿ. ಹಾಸ್ಯಗಾರರ ಸಂದರ್ಶನವನ್ನು ಈ ಬರಹ ಆಧರಿಸಿದೆ. ವ್ಯಕ್ತಿಯ ಪ್ರಜ್ಞೆ ರೂಪಿಸಿದ ಕಲಾ ಪ್ರಕಾರವೊಂದು ಸಮುದಾಯದಲ್ಲಿ ಹರಡಿಕೊಂಡ ಬಗೆಯನ್ನು ಈ ಅಧ್ಯಯನ ಗುರುತಿಸುತ್ತದೆ. ಇಂತಹ ಕಲಾ ಪ್ರಕಾರಗಳ ಹುಟ್ಟಿಗೆ ಕಾರಣವಾದ ವಾಸ್ತವವಾದಿ ರಂಗಭೂಮಿಯ ಪ್ರಭಾವವನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

## ಜನಪದ ಅರೆರಂಗ ಕಲೆಗಳು (ವಾದ್ಯ ಪ್ರಧಾನ)

1. **ಗುಮಟೆ ವಾದನ**

ಉತ್ತರ ಕನ್ನಡದ ಹಲವು ಬುಡಕಟ್ಟುಗಳಲ್ಲಿ ಪ್ರಚಲಿತವಿರುವ ಈ ವಾದ್ಯದ ಕುರಿತ ವಿವರವಾದ ದಾಖಲಾತಿಯನ್ನು ಈ ಅಧ್ಯಾಯ ಹೊಂದಿದೆ. ಹಾಲಕ್ಕಿ ಜನಾಂಗ, ಮರಾಠಿ ಜನಾಂಗ, ಸಿದ್ದಿ ಜನಾಂಗಗಳ ಗುಮಟೆ ವಾದನದ ಕ್ರಮಗಳನ್ನು ಇಲ್ಲಿ ದಾಖಲಿಸುವುದರ ಜತೆಗೆ ಅವುಗಳ ತೌಲನಿಕ ಅಧ್ಯಯನವನ್ನೂ ನಡೆಸಲಾಗಿದೆ. ಗುಮಟೆ ವಾದ್ಯದ ರೂಪ–ರಚನೆ, ರೂಪ–ಪ್ರಭೇದಗಳನ್ನೂ, ಹಾಲಕ್ಕಿಗಳ ಗುಮಟೆ ಪದಗಳನ್ನೂ ದಾಖಲಿಸುವುದರ ಜತೆಗೆ ಈ ವಾದ್ಯದ 'ಸಾಧ್ಯತೆ'ಗಳನ್ನೂ ವಿಶ್ಲೇಷಿಸಲಾಗಿದೆ.

2. **ಡಮಾಮಿ ಕುಣಿತ**

ಸಿದ್ದಿ ಜನಾಂಗದಲ್ಲಿ ರೂಢಿಯಲ್ಲಿರುವ 'ಡಮಾಮಿ' ಎಂಬ ವಾದ್ಯದ ಹಿನ್ನೆಲೆಯ ಕುಣಿತವನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ. ಡಮಾಮಿ ಎಂಬ ವಾದ್ಯದ ರೂಪ-ರಚನೆ, ಅದನ್ನು ಆಧರಿಸಿದ ಕುಣಿತದ ವಿವರ , ಡಮಾಮಿ ಹಾಡುಗಳು ಇವೆಲ್ಲವನ್ನು ಸಿದ್ದಿ ಜನಾಂಗದ ಬದುಕಿನ ಹಿನ್ನೆಲೆಯಲ್ಲಿ ಅಭ್ಯಾಸ ಮಾಡಲಾಗಿದೆ.

## ಯಕ್ಷಗಾನ - ಉತ್ತರ ಕನ್ನಡದ ತಿಟ್ಟು

ಈ ಅಧ್ಯಾಯದಲ್ಲಿ ಯಕ್ಷಗಾನ ಪ್ರದರ್ಶನದ ಸ್ಥೂಲ ಸ್ವರೂಪ , ಅದರ ರಂಗಸ್ಥಳ, ಆಂಗಿಕಾಭಿನಯ , ಮುಖವರ್ಣಿಕೆ, ವೇಷಭೂಷಣಗಳು ಮತ್ತು ಮಾತುಗಾರಿಕೆಯನ್ನೂ, 'ತಾಳಮದ್ದಲೆ' ಎಂಬ ಪ್ರಕಾರದ ಕುರಿತ ವಿವರಗಳನ್ನೂ ಈ ಕುರಿತ ಇಲ್ಲಿಯವರೆಗಿನ ಚರ್ಚೆಯ ಹಿನ್ನೆಲೆಯಲ್ಲಿ ದಾಖಲಿಸಲಾಗಿದೆ. ಯಕ್ಷಗಾನದಲ್ಲಿ 'ಉತ್ತರ ಕನ್ನಡದ ತಿಟ್ಟು ' ಎಂಬ ಪ್ರತ್ಯೇಕ ಶೈಲಿಯ ಕುರಿತು ನಡೆದಿರುವ ಇಲ್ಲಿಯವರೆಗಿನ ಪರ - ವಿರೋಧ ಚರ್ಚೆಗಳನ್ನೂ, ಉತ್ತರ ಕನ್ನಡದ ಶೈಲಿಯ ವೈಶಿಷ್ಟ್ಯವನ್ನೂ ಇಲ್ಲಿ ಕ್ರೋಢೀಕರಿಸಲಾಗಿದೆ. ಯಕ್ಷಗಾನ ರಂಗಕ್ಕೆ ಉತ್ತರ ಕನ್ನಡದ ವಿಶಿಷ್ಟ ಕೊಡುಗೆಗಳನ್ನು , ಪ್ರಮುಖ ಹೆಜ್ಜೆಯ ಗುರುತುಗಳನ್ನು ದಾಖಲಿಸಲಾಗಿದೆ . ಕೊನೆಯಲ್ಲಿ ಯಕ್ಷಗಾನ ರಂಗಭೂಮಿಯನ್ನೂ , ಅದರ ವಿಶಿಷ್ಟ ರಂಗ ತಂತ್ರಗಳನ್ನೂ ಆಧುನಿಕ ರಂಗಭೂಮಿಯ ಮೀಮಾಂಸೆಯಡಿ ವಿಶ್ಲೇಷಿಸಲಾಗಿದೆ.

## ಉತ್ತರ ಕನ್ನಡದ ಸಾಂಪ್ರದಾಯಿಕ ರಂಗಭೂಮಿಯ ಲಕ್ಷಣಗಳು

ಉತ್ತರ ಕನ್ನಡದ ಜಾನಪದ/ಸಾಂಪ್ರದಾಯಿಕ ರಂಗಭೂಮಿಯ ಕುರಿತ ಮೇಲಿನ ಅಧ್ಯಯನಗಳಲ್ಲಿ ದೊರಕಿಸಿಕೊಂಡ ಒಳನೋಟಗಳನ್ನು ಈ ಕಿರು ಅಧ್ಯಾಯದಲ್ಲಿ ಕ್ರೋಢೀಕರಿಸಿ ನೀಡಲಾಗಿದೆ.

## ಆಧುನಿಕ ರಂಗಭೂಮಿ ಮತ್ತು ಅನ್ವಯಿಕ ಮೀಮಾಂಸೆಯತ್ತ

ಉತ್ತರ ಕನ್ನಡದ ಆಧುನಿಕ ರಂಗಭೂಮಿಯನ್ನು ವಿಶ್ಲೇಷಿಸಲು ಅದರ ಚರಿತ್ರೆಯನ್ನು ಪ್ರದೇಶವಾರು ಹಾಗೂ ಕಾಲಾನುಕ್ರಮಣಿಕೆಯಡಿ ಪ್ರತ್ಯೇಕವಾಗಿ ದಾಖಲಿಸಲಾಗಿದೆ. 1890 ರಿಂದ 2005 ರ ವರೆಗಿನ ರಂಗ ಪ್ರಯೋಗಗಳನ್ನು ಘಟ್ಟದ ಮೇಲಿನ ಹಾಗೂ ಕರಾವಳಿಯ ರಂಗಚಟುವಟಿಕೆಗಳು ಎಂಬ ಭೌಗೋಲಿಕ ಹಿನ್ನೆಲೆಯಲ್ಲಿ ಸಮೀಕ್ಷಿಸಲಾಗಿದೆ. ಇದಲ್ಲದೇ ಮಕ್ಕಳ ರಂಗಭೂಮಿಯನ್ನೂ , ಗ್ರಾಮೀಣ ನಾಟಕಗಳನ್ನೂ ಪ್ರತ್ಯೇಕವಾಗಿ ಚರ್ಚಿಸಲಾಗಿದೆ. ವಿಶ್ಲೇಷಣಾ ವಿಭಾಗದಡಿ ಕರಾವಳಿ ಹಾಗೂ ಘಟ್ಟದ ಮೇಲಿನ ರಂಗಚಟುವಟಿಕೆಗಳ ವೈಶಿಷ್ಟ್ಯಗಳನ್ನೂ,

ಆಧುನಿಕ ರಂಗಭೂಮಿಯ ವಿಶೇಷ ಲಕ್ಷಣಗಳನ್ನೂ, ರಂಗಭೂಮಿ ಚಟುವಟಿಕೆಗಳನ್ನು ನಿಯಂತ್ರಿಸಿದ ಅಲ್ಲಿಯ ಪರಿಸರದ ಪ್ರಭಾವವನ್ನೂ ವಿವರವಾಗಿ ಅಧ್ಯಯನ ಮಾಡಲಾಗಿದೆ.

ಈ ಅಧ್ಯಾಯದ ದ್ವಿತೀಯಾರ್ಧದಲ್ಲಿಅನ್ವಯಿಕ ಮೀಮಾಂಸೆಯ ಅರ್ಥ ಹಾಗೂ ಆಗತ್ಯ, ಸಾಂಪ್ರದಾಯಿಕ ಹಾಗೂ ಆಧುನಿಕ ರಂಗಭೂಮಿಯ ಇತಿಮಿತಿಗಳು , ಆಧುನಿಕ ರಂಗಭೂಮಿ ತನ್ನ ಮಿತಿಯನ್ನು ದಾಟಲು ನಡೆಸಿದ ಪ್ರಯತ್ನಗಳು ಚರ್ಚೆಗೆ ಬಂದಿವೆ.

ಇವತ್ತಿನ ನಮ್ಮ ಆಧುನಿಕರಂಗಭೂಮಿ ಪಶ್ಚಿಮದ ರಂಗಭೂಮಿಯ ಹಿಡಿತದಿಂದ ಬಿಡಿಸಿಕೊಳ್ಳಬೇಕಾದ, ವಾಸ್ತವವಾದಿ ರಂಗ ಸಂಪ್ರದಾಯಗಳ ಏಕತಾನತೆಯಿಂದ ಪಾರಾಗಬೇಕಾದ ಹಾಗೂ ನಮ್ಮ ಸಂಸ್ಕೃತಿಯ ಬಹುತ್ವವನ್ನು ಗ್ರಹಿಸಲು ಮತ್ತು ಅಭಿವ್ಯಕ್ತಿಸಲುಬೇಕಾದ ಮಾಧ್ಯಮವಾಗಿ ಬೆಳೆಯಬೇಕಾದ ಅಗತ್ಯವಿದೆ. ಈ ಅಗತ್ಯವನ್ನು ಪೂರೈಸಿಕೊಳ್ಳುವ ಮಾರ್ಗವೇ ಆಧುನಿಕ ರಂಗಭೂಮಿಯ ನಿರ್ವಸಾಹತೀಕರಣದ ಪ್ರಕ್ರಿಯೆಯಾಗಿದೆ. ಈ ನಿರ್ವಸಾಹತೀಕರಣ ಪ್ರಕ್ರಿಯೆಯ ಅಂಗವಾಗಿ ಆಧುನಿಕ ರಂಗಭೂಮಿ ಸಮೂಹದ ಬದುಕಿನಲ್ಲಿ ಬೇರು ಬಿಟ್ಟಿರುವ ಸಾಂಪ್ರದಾಯಿಕ ರಂಗಭೂಮಿಯತ್ತ ಮುಖಮಾಡಿ, ಅದರಿಂದ ಹೊಸ ನುಡಿಗಟ್ಟುಗಳನ್ನು ಸೃಷ್ಟಿಸಿಕೊಳ್ಳಬೇಕಾಗಿದೆ; ಸಾಂಪ್ರದಾಯಿಕ ರಂಗಕಲೆಗಳ ಹಾಗೂ ಅವುಗಳ ರಂಗ ಸಂಪ್ರದಾಯಗಳ ನೆರವಿನಿಂದ ಉಸಿರು ಪಡೆದುಕೊಳ್ಳಬೇಕಾಗಿದೆ. ಆದರೆ ಅದೇಕಾಲಕ್ಕೆ ಆಧುನಿಕ ರಂಗಭೂಮಿ ಸಾಂಪ್ರದಾಯಿಕ ರಂಗಭೂಮಿಯ ನೆರವನ್ನು ಕೇವಲ ತನ್ನನ್ನು ತಾನು ಸಿಂಗಾರಮಾಡಿಕೊಳ್ಳುವುದಕ್ಕಾಗಿ ಮಾತ್ರ 'ಬಳಸಿ'ಕೊಳ್ಳದಂತೆ ಎಚ್ಚರವಹಿಸ ಬೇಕಾಗಿದೆ. ಈ ನಿಟ್ಟಿನಲ್ಲಿ ಕೇವಲ 'ಎತ್ನಿಕ್' ಮಾದರಿಯಲ್ಲದ, ಕೇವಲ ಆಕರ್ಷಕಗೊಳಿಸುವ ಉದ್ದೇಶವಲ್ಲದ, ಅನ್ವಯಿಕ ಪ್ರಯತ್ನಗಳ ಅಗತ್ಯಗಳ ಕುರಿತು ಇಲ್ಲಿ ಚಿಂತನೆ ನಡೆಸಲಾಗಿದೆ. ನಮ್ಮ ಸಾಂಪ್ರದಾಯಿಕ ರಂಗಕಲೆಗಳ ಹಾಗೂ ಅವುಗಳ ರಂಗಸಂಪ್ರದಾಯಗಳ ನೆರವಿನಿಂದ ಆಧುನಿಕ ರಂಗಭೂಮಿ ಉಸಿರು ಪಡೆದುಕೊಳ್ಳುವ ಕ್ರಿಯೆಗೆ ಇರುವ ಮಹತ್ವದ ಹಿನ್ನೆಲೆಯಲ್ಲಿ, ಉತ್ತರ ಕನ್ನಡದ ಸಾಂಪ್ರದಾಯಿಕ ರಂಗಭೂಮಿಯಿಂದ ಆಧುನಿಕ ರಂಗಭೂಮಿ ಪಡೆದುಕೊಳ್ಳಬಹುದಾದ ನೆರವನ್ನು ಕುರಿತು ಚರ್ಚಿಸಲಾಗಿದೆ. ಹಾಗೂ, ಅನ್ವಯಿಕ ಸಾಧ್ಯತೆಗಳ ಕೆಲವು ಮಾದರಿಗಳೊಂದಿಗೆ ಇಲ್ಲಿ ಚರ್ಚಿಸಲಾಗಿದೆ.

ಹೀಗೆ, ಚರ್ಚೆಯು ಒಳಗೊಂಡಿರುವ ಕಲಾಪ್ರಕಾರಗಳ ಬಹುತ್ವವನ್ನು ಅನುಲಕ್ಷಿಸಿ ಅಧ್ಯಯನದ ಹಲವು ಮಾದರಿಗಳನ್ನು ಈ ಪ್ರಬಂಧದಲ್ಲಿ ಬಳಸಲಾಗಿದೆ. ಇದೇ ರೀತಿ ಕಲಾಪ್ರದರ್ಶನಗಳ ದಾಖಲಾತಿಯಲ್ಲೂ ಸಹ ಪ್ರತಿಯೊಂದು ಕಲಾಪ್ರಕಾರಗಳನ್ನೂ ಅವುಗಳ ಪ್ರದರ್ಶನ ವೈಶಿಷ್ಟ್ಯಗಳನ್ನು ಆಧರಿಸಿ ಬೇರೆ ಬೇರೆ ರೀತಿಗಳಲ್ಲಿ ದಾಖಲುಗೊಳಿಸಲಾಗಿದೆ. ಯಾವುದೇ ಒಂದು ಅಧ್ಯಯನ ಮಾದರಿಯನ್ನು ಇಲ್ಲಿ ಅನುಸರಿಸಲಾಗಿಲ್ಲ. ಉದಾಹರಣೆಗೆ ಸಂದರ್ಭ ಸಿದ್ಧಾಂತವು ಸಂಸ್ಕೃತಿಯೊಳಗಿನ ಜನರ ಮಾತುಕತೆಯನ್ನು ಅರ್ಥೈಸುವುದಕ್ಕೆ ನೆರವಾಗುವುದಾದರೂ,

ಒಂದು ಸಮಾನ ದೂರವನ್ನು ಸ್ಥಾಪಿಸಿಕೊಳ್ಳದಿದ್ದಲ್ಲಿ ರಂಗಾತ್ಮಕತೆಯನ್ನು ಆಯ್ದುಕಟ್ಟಲು ಸಾಧ್ಯವಿಲ್ಲ.[3] . ಆಚರಣೆಯ ಒಳಗಿರುವವನಿಗೆ ಆಚರಣೆಯೇ ಒಂದು ಕಲೆಯೆಂದು ಕಾಣದಿರುವುದು ಸಹಜ. ಆದರೆ ಅದೇ ಕಾಲಕ್ಕೆ ಆರಾಧನೆಯ ಹೊರಗೆ ನಿಂತು ಅಭ್ಯಸಿಸುವವನಿಗೆ ಆ ಕಲೆಯ ಅರ್ಥ ತಿಳಿದುಕೊಳ್ಳಲು ಆಚರಣೆಯ ವ್ಯಾಕರಣ ತಿಳಿದಿರಬೇಕಾದದ್ದು ಅನಿವಾರ್ಯ. ಏಕೆಂದರೆ ಅನ್ಯನೊಡನೆ ಆಚರಣೆ ಸಂಭಾಷಿಸುವುದಿಲ್ಲ . ಈ ಎಚ್ಚರವನ್ನು ಈ ಅಧ್ಯಯನ ವಿಧಾನದಲ್ಲಿ ಇಟ್ಟುಕೊಳ್ಳಲಾಗಿದೆ. ಅಧ್ಯಯನ ಸಿದ್ಧಾಂತಗಳ ತಾತ್ವಿಕ ಚೌಕಟ್ಟುಗಳನ್ನು ಈ ಅಧ್ಯಯನ ವಿಧಾನ ಬಳಸಿಕೊಂಡ ಬಗೆ ಇದು . ಜಾನಪದ ಕಲಾಪ್ರಕಾರಗಳನ್ನು ಅವುಗಳ ಆಚರಣೆಗಳ ಅಧ್ಯಯನದ ಮೂಲಕ ಅರ್ಥೈಸಲು ಪ್ರಯತ್ನಿಸಿದರೆ , ಆಧುನಿಕ ರಂಗಭೂಮಿಯನ್ನು ಅದರ ಗತಿಕ್ರಮಣದ ಇತಿಹಾಸದ ಅಧ್ಯಯನದ ಮೂಲಕ ಅರ್ಥೈಸಲು ಪ್ರಯತ್ನಿಸಲಾಗಿದೆ.

ಲಿಖಿತ ಮಾಧ್ಯಮಕ್ಕೆ ಮೀರಿದ, ದೃಶ್ಯ ಶ್ರವ್ಯ ಮಾಧ್ಯಮಗಳಲ್ಲಿ ಪ್ರಕಟವಾಗುವ ಈ ಕಲಾ ಪ್ರದರ್ಶನಗಳನ್ನು ಲಿಖಿತ ರೂಪದಲ್ಲಿ ದಾಖಲಿಸುವಾಗ ಹಲವಾರು ಸಮಸ್ಯೆಗಳು ಕಾಡಿವೆ. ಒಂದು ಕಲಾ ಮಾಧ್ಯಮವನ್ನು ಇನ್ನೊಂದು ಮಾಧ್ಯಮದ ಮೂಲಕ ಸಮರ್ಪಕವಾಗಿ ಹೇಳಲು ಸಾಧ್ಯವಿಲ್ಲ ಎಂಬ ಅನಿಸಿಕೆ ಈಗಲೂ ಉಳಿದುಕೊಂಡಿದೆ. ದೃಶ್ಯ-ಶ್ರವ್ಯ ಅನುಭವವನ್ನು ಅಷ್ಟು ಮೂರ್ತವಲ್ಲದ ಶಾಬ್ದಿಕ ಮಾಧ್ಯಮದಲ್ಲಿ ಅನುವಾದಿಸುವ ಈಗಿನ ತುರ್ತನ್ನು ನಿಭಾಯಿಸಲು ಕೆಲವೆಡೆ ಚಿತ್ರ ಮಾಧ್ಯಮವನ್ನೂ ಬಳಸಿಕೊಳ್ಳಲಾಗಿದೆ. ಕಲಾ ಪ್ರಕಾರಗಳ ಚರ್ಚೆಗೆ ಪೂರಕವಾಗಿ ಇಲ್ಲಿ ರೇಖಾ ಚಿತ್ರಗಳ ಬಳಕೆಯಿವೆ. ಚಿತ್ರದ ರೇಖೆಗಳು ನಾದ, ನೃತ್ಯಗಳ ಪದಗತಿ ಮತ್ತು ಪಾದಗತಿಯನ್ನು ಆದಷ್ಟು ಹತ್ತಿರದಿಂದ ಹಿಂಬಾಲಿಸಿವೆ.

ಮೊದಲು ಈ ಎಲ್ಲ ಜನಪದ ಕಲಾಪ್ರಕಾರಗಳನ್ನು ವಿಡಿಯೋ ರೆಕಾರ್ಡ್ ಮಾಡಿಕೊಂಡು, ಅವುಗಳನ್ನೇ ಪಠ್ಯವನ್ನಾಗಿ ಸ್ವೀಕರಿಸಿ ಅಧ್ಯಯನ ಮಾಡಿ, ಲಿಖಿತ ರೂಪಕ್ಕೆ ಪರಿವರ್ತಿಸಲು ಪ್ರಯತ್ನಿಸಲಾಗಿದೆ. ಅಗತ್ಯವಿರುವೆಡೆ ವಾದ್ಯಗಳ, ಕುಣಿತಗಳ ಕ್ರಮಗಳನ್ನು ಜನಾಂಗಿಕ ಹಿನ್ನೆಲೆಯಲ್ಲಿ ತೌಲನಿಕವಾಗಿ ಅಧ್ಯಯನ ಮಾಡಲಾಗಿದೆ.

## ಆಧಾರ ಪಠ್ಯಗಳು


1. ಉತ್ತರ ಕನ್ನಡ ಜಿಲ್ಲೆಯ ಕುರಿತು ಬರೆಯುತ್ತ ಎಸ್. ಸಿಲ್ವಾ 'ಈ ಜಿಲ್ಲೆಯ ಒಟ್ಟೂ ಕ್ಷೇತ್ರದ 80% ಪ್ರದೇಶವು ಅರಣ್ಯದಿಂದ ಕೂಡಿದೆ. ಇದು ಪ್ರಾಚೀನ ಜಾಗತಿಕ ಸಂಸ್ಕೃತಿಗಳ ಉಗ್ರಾಣವಾಗಿದೆ. ಅವು ಮುಖ್ಯವಾಗಿ ಮಾತೃ ಪ್ರಧಾನ, ಪಿತೃ ಪ್ರಧಾನ ಮತ್ತು ಟೋಟಮಿಜಂ ಆಗಿದೆ. ' ಎಂದಿದ್ದಾರೆ. (ಎಸ್. ಸಿಲ್ವಾ. ಕಾರವಾರ ಜಿಲ್ಲಾ ದರ್ಶನ (ಅನು) ಎಂ.ಎನ್. ಭಂಡಾರಕರ್ : ಶ್ರೀರಾಮ ಪ್ರಿಂಟಿಂಗ್ ಕಾರವಾರ ಉತ್ತರ ಕನ್ನಡ).
2. ಅಕ್ಷರ. ಕೆ. ವಿ. : ಸಮ್ಮುಖದಲ್ಲಿ ಸ್ವಗತ : ಅಕ್ಷರ ಪ್ರಕಾಶನ ಹೆಗ್ಗೋಡು ಸಾಗರ, 2002.
3. "ಕಲೆ ಸಂಸ್ಕೃತಿಯ ಒಂದು ಅಂಗವಾಗಿದ್ದರಿಂದ , ಬೃಹದಾಕಾರದ ಆ ಸಂಸ್ಕೃತಿ ಕಲೆಯ ಮೇಲೆ ತನ್ನ 'ಹಕ್ಕು' ಸ್ಥಾಪಿಸುತ್ತದೆ. ಆದರೆ ಕಲೆಯಲ್ಲಿ ಒಂದು ವಿಚಿತ್ರವಾದ ವಿದ್ರೋಹದ ಗುಣವಿರುತ್ತದೆ. ಅದು ಅನೇಕ ಸಂದರ್ಭಗಳಲ್ಲಿ ತನ್ನ ಸಂಸ್ಕೃತಿ ಹಾಕಿಕೊಟ್ಟ ಲಕ್ಷ್ಮಣ ರೇಖೆಯಿಂದ ಹೊರಗೆ ಬರುತ್ತದೆ. ಈ ಹೊರಗೆ ಬರುವ ಪ್ರವೃತ್ತಿಯಿಂದಲೇ ಅದು ಸಂಸ್ಕೃತಿಯಲ್ಲಿರುವ ಜನರೊಂದಿಗೂ, ಅನ್ಯ ಸಂಸ್ಕೃತಿಯ ಜನರೊಂದಿಗೂ ಸಂಭಾಷಣೆಗೆ ಇಳಿಯುತ್ತದೆ." (ಚಂದ್ರಕಾಂತ ಕುಸನೂರು: ಸಾಹಿತ್ಯ ಮತ್ತು ಚಿತ್ರಕಲೆ : ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು 1993).